ಇಂದು ನಮಗೆಲ್ಲರಿಗೂ ಸಾಮಾನ್ಯವಾಗಿ 'ಮಧ್ಯಕಾಲೀನ ಭಾರತ ಚರಿತ್ರೆ ಹಾಗೂ ಸಮಾಜ' (ಸ್ಥೂಲವಾಗಿ 14ನೆಯ ಶತಮಾನದಿಂದ 18ನೆಯ ಶತಮಾನದ ಕಾಲಘಟ್ಟ) ಎಂದಕೂಡಲೇ ಹೊಳೆಯುವ ವಿಚಾರಗಳೆಂದರೆ, ಎಲ್ಲಿಂದಲೋ ಬಂದು ನಮ್ಮ ನಾಡನ್ನು ಆಕ್ರಮಿಸಿಕೊಂಡ ಕ್ರೂರ ಮುಸ್ಲಿಮ್ ನವಾಬ–ಬಾದ್‌ಶಹಾಗಳು, ಅವರಿಂದ ಹಿಂದೂ ರಾಜ್ಯಗಳ ಮೇಲಾದ ಆಕ್ರಮಣ ಮತ್ತು ಕೊಳ್ಳೆ, ಆರ್ಷೇಯ ಹಿಂದೂ ಧರ್ಮದ ಅವಹೇಳನ, ಹಿಂದೂ ದೇವಾಲಯಗಳ ನಾಶ, ಅಸಂಖ್ಯ ಹಿಂದೂಗಳ ಮತಾಂತರ, ಇತ್ಯಾದಿ. ಸಂಕ್ಷಿಪ್ತವಾಗಿ ಹೇಳುವುದಾದರೆ: ಭಾರತದ ಅವನತಿಯ ಕಾಲ; 'ನಾವು' ಮತ್ತು 'ಅವರ' ನಡುವೆ ನಡೆದ ಭಯಾನಕ ಘರ್ಷಣೆಯ ಕಾಲ. ಈ ಬಗೆಯ ಗ್ರಹಿಕೆಗೆ ಪ್ರಮುಖ ಕಾರಣವೆಂದರೆ ಜೇಮ್ಸ್ ಮಿಲ್ ಹಾಗೂ ಅವನನ್ನು ಅನುಸರಿಸಿದ ಇತರರು ಬರೆದ ವಸಾಹತುಶಾಹಿ ಚರಿತ್ರೆಗಳು, ಮತ್ತು ಇವರನ್ನೇ ಸರಿಸುಮಾರು ಅನುಸರಿಸಿದ ಮೊದಲ ಘಟ್ಟದ ಆರ್.ಸಿ. ಮಜುಮ್‌ದಾರ್, ಮುಂತಾದವರ ಭಾರತೀಯ ಚರಿತ್ರೆಗಳು. ವಸಾಹತುಶಾಹಿ ಚರಿತ್ರೆಗಳು ವಸಾಹತುಗಳನ್ನು ಒಡೆದು ಆಳುವ (ಹಿಂದೂಗಳು ಮತ್ತು ಮುಸ್ಲಿಮರು ಆಜನ್ಮ ಶತ್ರುಗಳು, ಎಂದೂ ಅವರು ಒಟ್ಟಾಗಲು ಸಾಧ್ಯವಿಲ್ಲ ಎಂಬ) ಆಶಯದ ರೂಪಾಂತರಗಳು. ಈ ಸತ್ಯವನ್ನು ಈಗ ಹೆಚ್ಚಿನ ಬ್ರಿಟಿಷ್ ಹಾಗೂ ಭಾರತೀಯ ಚರಿತ್ರಕಾರರು ದಾಖಲಿಸಿರುವುದರಿಂದ ಈ ವಿಷಯವನ್ನು ವಿಸ್ತರಿಸಬೇಕಾಗಿಲ್ಲ ಎಂದು ತೋರುತ್ತದೆ.

ಕಳೆದ ಸಹಸ್ರಮಾನದ 12–18ನೆಯ ಶತಮಾನಗಳನ್ನು ಹೇಗೂ ಮಜುಮ್‌ದಾರ್ ಹೇಳುವಂತೆ 'ಒಂದು ಸುದೀರ್ಘ ರಾತ್ರಿಯ ಕತ್ತಲೆ' ಎಂದು ಕರೆಯಲು ಸಾಧ್ಯವಿಲ್ಲ. ರಾಜಕೀಯವಾಗಿ, ಈ ಕಾಲಘಟ್ಟದಲ್ಲಿಯೇ ದಕ್ಷಿಣದ ಪ್ರಸಿದ್ಧ ಹಿಂದೂ ರಾಜ್ಯಗಳಾದ ಹೊಯ್ಸಳ, ಕಾಕತೀಯ, ವಿಜಯನಗರ, ಚೋಳ, ಮರಾಠ ಸಾಮ್ರಾಜ್ಯಗಳಿದ್ದುವು; ಉತ್ತರ ಭಾರತದಲ್ಲಿಯೂ ಸಿಖ್ಖರು ಮತ್ತು ಅಸ್ಸಾಮ್–ಮಣಿಪುರ ಇತ್ಯಾದಿ ಪೂರ್ವ ಭಾರತದ ರಾಜ್ಯಗಳು ಸ್ವತಂತ್ರವಾಗಿಯೇ ಇದ್ದುವು. ಸಾಹಿತ್ಯಕವಾಗಿ, ಇದೇ ಕಾಲಘಟ್ಟದಲ್ಲಿ ಪ್ರಾಂತೀಯ ಭಾಷೆಗಳು ಬೆಳೆದು, ಕುಮಾರವ್ಯಾಸ, ನನ್ನಯ್ಯ, ತುಳಸಿದಾಸ, ಮುಂತಾದ ಶ್ರೇಷ್ಠ ಕವಿಗಳು ಭಾರತಾದ್ಯಂತ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಧಾರ್ಮಿಕವಾಗಿ, ಈ ಕಾಲಖಂಡ ಶ್ರೇಣೀಕೃತ ವರ್ಣಾಶ್ರಮ ವ್ಯವಸ್ಥೆಯನ್ನು ತಿರಸ್ಕರಿಸಿದ ಭಕ್ತಿಯುಗದ ಕಾಲ – ಪುರಂದರ ದಾಸ–ಕನಕದಾಸ, ನಾಮದೇವ್–ಜ್ಞಾನದೇವ್, ಚೈತನ್ಯ ಪ್ರಭು, ತ್ಯಾಗರಾಜ, ಇತ್ಯಾದಿ ಮಹಾನ್ ಸಂತಕವಿಗಳ ಕಾಲ. ಹಾಗೆಯೇ, ಆರ್ಷೇಯ ವೇದಪ್ರಾಮಾಣ್ಯವನ್ನು ತಿರಸ್ಕರಿಸಿದ ಶರಣ ಚಳವಳಿ, ಸಿಖ್ ಧರ್ಮ, ಕಬೀರ್ ಪಂಥ, ಸೂಫಿ ಪಂಥ, ಇತ್ಯಾದಿ ಧಾರ್ಮಿಕ ಪ್ರತಿರೋಧಾತ್ಮಕ ಧರ್ಮ–ಪಂಥಗಳ ಕಾಲ.



ಮಧ್ಯಕಾಲೀನ ಯುಗದ ಸಂಕೀರ್ಣತೆಯನ್ನು ಹಾಗೂ ಬಹುಮುಖಿ ಸಂಸ್ಕೃತಿಯನ್ನು ಕುರಿತು ಕಳೆದ ಎರಡು ಮೂರು ದಶಕಗಳಲ್ಲಿ ರೋಮಿಲಾ ಥಾಪರ್, ರಿಚರ್ಡ್ ಈಟನ್, ವಿನಯ್ ಲಾಲ್, ಇತ್ಯಾದಿ ಅನೇಕ ವಿದ್ವಾಂಸರು ಪಾಂಡಿತ್ಯಪೂರ್ಣ ಗ್ರಂಥಗಳನ್ನು ರಚಿಸಿದ್ದಾರೆ; ಅವರುಗಳಲ್ಲಿ ಜಾನ್ ಸ್ಟ್ರಾಟನ್ ಹಾಲಿ (**John Straton Hawley**) ಎಂಬ ಅಮೆರಿಕನ್ ವಿದ್ವಾಂಸರು ಒಬ್ಬರು; ಅವರು 2015ರಲ್ಲಿ **A Storm of Songs: India and the Idea of the Bhakti Movement** ಎಂಬ ಖ್ಯಾತ, ಸಂಶೋಧನಾತ್ಮಕ ಕೃತಿಯನ್ನು ರಚಿಸಿದರು. ಜಾತಿ–ಮತ–ಪಂಥಗಳನ್ನು ಮೀರಿದ ಭಕ್ತಿಪಂಥವನ್ನು ಕುರಿತು, ಆ ಕೃತಿಯ ಒಂದು ಸಂದರ್ಭದಲ್ಲಿ ಅವರು ಹೀಗೆ ಹೇಳುತ್ತಾರೆ: "ಬೃಂದಾವನವು ಸಂಪೂರ್ಣವಾಗಿ ಹೊರಗಿನ 'ಮುಘಲ್ ಭಕ್ತಿ' ಎಂಬ ವಿಶಾಲ ಜಗತ್ತಿಗೆ ಸೇರಿಕೊಂಡಿತ್ತು; ಮತ್ತು ಅಲ್ಲಿ ಮುಸ್ಲಿಮರ ಹಾಗೂ ವೈಷ್ಣವರ 'ತಡೆಗೋಡೆಗಳನ್ನು ದಾಟುವಿಕೆ' (crossovers) ಸ್ಪಷ್ಟವಾಗಿ ಕಂಡುಬರುತ್ತಿತ್ತು. ಬ್ರಜಭಾಷೆಯಲ್ಲಿ ಕಾವ್ಯವನ್ನು ರಚಿಸುತ್ತಿದ್ದ ಹದಿನಾರನೆಯ ಶತಮಾನದ ಅತ್ಯಂತ ಮಹತ್ವದ ಕೃಷ್ಣಭಕ್ತಿಯ ಕವಿಗಳೆಂದರೆ ರಸ್ ಖಾನ್ ಮತ್ತು ರಹೀಮ್; ರಹೀಮನಾದರೋ ಮುಘಲರ ಉಚ್ಚ ಶ್ರೇಣಿಯ ಅಧಿಕಾರಿಯಾಗಿದ್ದ. ಹಾಗೆಯೇ, ಆ ಶತಮಾನದ ಕೊನೆಯ ದಶಕದಲ್ಲಿ ಕೃಷ್ಣಭಕ್ತರಾದ ಶ್ರೀಗೋಪಾಲ್ ಮತ್ತು ಬೃಂದಾವನ್ ದಾಸ್ ಇತರ ಹಿಂದೂಗಳೊಡನೆ ಸೂಫಿ ಕವಿ ಮಿರ್ಜಾ ಅಬ್ದ್ ಅಲ್–ಖಾದಿರ್ ಬೀದಿಲ್‌ನೊಡನೆ ದೆಹಲಿಯಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ